ಓಎಸ್ ನಂ. 48/2019
ಪಿ ಡಬ್ಲ್ಯೂ -2

**ಸಾಕ್ಷಿಯನ್ನು ದಿನಾಂಕಃ 17.03.2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಎ ಎಂ ಕೆ ವಕೀಲರಿಂದ**

1. ನಾನು ಸ್ನಾತ್ತಕೋತ್ತರ ಪದವೀಧರ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಜನ್ಮ ದಿನಾಂಕ 03.08.1985. ನನ್ನ ತಂದೆಗೆ ಈಗ 85 ವರ್ಷ ವಯಸ್ಸಾಗಿರುತ್ತದೆ. ನಾನು ಸುಮಾರು 10-12 ವರ್ಷಳಿಂದ ನಮ್ಮ ಮನೆಯ ಯಜಮಾನಿಕೆಯನ್ನು ಮಾಡುತ್ತಿರುತ್ತೇನೆ. ಈಗ ನನ್ನ ತಂದೆಗೆ ಬುದ್ದಿ ಜ್ಞಾನ ಸರಿ ಇರುತ್ತದೆ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸಲು ವಕೀಲರಿಗೆ ನನ್ನ ತಂದೆ ಮಾಹಿತಿ ನೀಡಿರುತ್ತಾರೆ. ಸುಮಾರು 10-12 ವರ್ಷಗಳಿಂದ ದಾವಾ ವಿಷಯದ ಬಗ್ಗೆ ವೈಯಕ್ತಿಕ ಮಾಹಿತಿ ಇರುತ್ತದೆ. ನನ್ನ ತಂದೆ ಆರೋಗ್ಯವಾಗಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಆಗುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಬಂದು ಸಾಕ್ಷಿ ನುಡಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು, ನಾನು ಈ ದಾವೆಯಲ್ಲಿ ಅವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ವಿಚಾರದ ಬಗ್ಗೆ ನನಗೆ ತಿಳಿಸಿರುತ್ತಾರೆ.

2. ಈ ದಾವೆಯ ಸ.ನ. 7/2 ಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ. ಸ.ನ 7 ಒಟ್ಟು ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಸ.ನಂ 4 ಪೋಡಾಗಿರುತ್ತದೆ. ಆ ರೀತಿ ಪೋಡಾಗಿ ಎಷ್ಟು ವರ್ಷಗಳಾಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ಸ.ನ 7/1, 7/3 ಮತ್ತು 7/4 ಎಷ್ಟು ವಿಸ್ತೀರ್ಣ ಇರುತ್ತದೆ ಹಾಗೂ ಯಾರ ಹೆಸರನಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸ.ನ. 7 ಪೋಡಾಗಿರುವ ಬಗ್ಗೆ ನಾನು ದಾಖಲಾತಿಗಳನ್ನು ನೋಡಿರುತ್ತೇನೆ. ಗೋವಿಂದಪ್ಪ ನನ್ನ ತಾತ. ಸದರಿ ಗೋವಿಂದಪ್ಪರವರಿಗೆ ಸ.ನ. 7/2 ಗೇಣಿ ಮೂಲಕ ಬಂದಿರುತ್ತದೆ. ಆ ರೀತಿ ಯಾವ ಸಾಲಿನಲ್ಲಿ ಗೇಣಿ ಮೂಲಕ ಬಂದಿರುತ್ತದೆ ಎಂದು ನನ್ನಿಂದ ಹೇಳಲಾಗುವುದಿಲ್ಲ. ನನ್ನ ತಾತ ಗೋವಿಂದಪ್ಪರವರಿಗೆ 5 ಜನ ಹೆಣ್ಣು ಮಕ್ಕಳು ಹಾಗೂ 5 ಜನಗಂಡುಮಕ್ಕಳು. ಆ ಪೈಕಿ ರಂಗಶಾಮಯ್ಯ, ಹನುಮಂತರಯಪ್ಪ, ಕೃಷ್ಣಪ್ಪ, ತಿಮ್ಮಪ್ಪ, ಶಂಕರಪ್ಪ, ಮಲ್ಲಮ್ಮ, ಕಾಂತಮ್ಮ ರವರ ಹೆಸರುಗಳು ನನಗೆ ಗೊತ್ತು. ಸದರಿ ಮಲ್ಲಮ್ಮರವರು ಈ ಕೇಸಿನ 1 ನೇ ಪ್ರತಿವಾದಿ ಎಂದರೆ ಸರಿ. ನನ್ನ ತಾತನಿಗೆ ಸೇರಿದ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ.

3. 1970 ನೇ ಸಾಲಿನಲ್ಲಿ ಸ.ನ. 7/2, 25/3, 25/4 ನ್ನು ಭಾಗ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತು, ಬೇರೆ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ವಿಭಾಗದ ಬಗ್ಗೆ ನನಗೆ

ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸದರಿ ವಿಭಾಗದಲ್ಲಿ ಗೋವಿಂದಪ್ಪರವರಿಗೆ ಆಸ್ತಿಗಳು ಹೋಗಿದ್ದವೋ ಇಲ್ಲವೋ ನನಗೆ ಗೊತ್ತಿಲ್ಲ. ಗೋವಿಂದಪ್ಪ ಮತ್ತು ಅವರ ಹೆಂಡತಿ ಭಾಗಕ್ಕೆ ಆಸ್ತಿಗಳನ್ನು ನೀಡಿರುವುದಿಲ್ಲ. ದಿಃ 12.11.1970 ರಂದು ವಿಭಾಗ ಪತ್ರ ಬರೆದುಕೊಂಡಿರುತ್ತಾರೆ. ವಿಭಾಗಪತ್ರವನ್ನು ಛಾಪಾ ಕಾಗದದಲ್ಲಿ ಬರೆದಿರುತ್ತಾರೋ ಅಥವಾ ಬಿಳಿ ಹಾಳೆ ಮೇಲೆ ಬರೆದಿರುತ್ತಾರೋ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ವಿಭಾಗ ಮಾಡಿಕೊಂಡಿರುವ ಬಗ್ಗೆ ನನಗೆ ಹೇಳಿದ್ದು, ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ವಿಭಾಗಪತ್ರಕ್ಕೆ ಹನುಮಂತರಾಯಪ್ಪರವರು ಹೆಬ್ಬೆಟ್ಟನ್ನು ಹಾಕಿರುತ್ತಾರೆ, ರಂಗಶಾಮಯ್ಯರವರು, ತಿಮ್ಮಪ್ಪರವರು ಸಹಿಗಳನ್ನು ಮಾಡಿರುತ್ತಾರೆ. ವಿಭಾಗಪತ್ರದ ಆಧಾರದ ಮೇಲೆ ಮ್ಯುಟೇಷನ್ ಆಗಿರುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ವಿಭಾಗಪತ್ರವನ್ನು ಕಂದಾಯ ಇಲಾಖೆರವರ ಮುಂದೆ ಸಲ್ಲಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ವಿಭಾಗಪತ್ರವನ್ನು 2011 ರಲ್ಲಿ ನೋಡಿರುತ್ತೇನೆ. ವಿಭಾಗಪತ್ರವನ್ನು ನನ್ನ ತಂದೆ ಎಲ್ಲಿಯಾದರು ಹಾಜರುಪಡಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪಹಣಿ ಪತ್ರಿಕೆ ಮೊದಲು ಗೋವಿಂದಪ್ಪನ ಹೆಸರಿನಲ್ಲಿದ್ದವು.

ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**